ಫಾರೆಸ್ಟ್ರಿ ಇಲಾಖೆ.

ನೋಟಿಫಿಕೇಷನ್, ತಾರೀಖು 1ನೆ ಮಾರ್ಚ್ 1909, ಚಿಕ ಮಗಳೂರು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಕಡೂರು ಡಿಸ್ಟ್ರಿಕ್ಟ್ಗೆ ಬಾಬತು ಆಯಾಯ ಡಿಪೋಗಳ ಕೆಳಗೆ ಕಂಡ ನಾಟಾಗಳನ್ನು ಆಯಾಯ ಡಿಪೋಗಳ ಕೆಳಗಡೆಯಲ್ಲಿ ನಮೂದು ಮಾಡಿರುವ ತಾರೀಖು ಗಳಲ್ಲಿ ಕಡೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ :—

ನಂ.	ನಾಟಾ ವಿವರ.	ಹೆಬ್ಬೆ ಡಿಪೋ 20—3—09		ದಾನಿವಾಸ ಡಿಪೋ 23—3—09		ಕಿವಮೊಗ್ಗ ಡಿಪೋ 26—3—09		ಬೆಂಕೀಪುರದ ಡಿಪೋ 27—3—09		ತರೀಕೆರೆ ಡಿಪೋ 29—3—09		ಕಡೂರು ಡಿಪೋ 31—3—09		ಷರಾ.
		ಅದದು.	ಸಲೆ ಅಡಿ.	ಅದದು.	ಸಲೆ ಅಡಿ.	ಅದದು.	ಸಲೆ ಅಡಿ.	ಅದದು.	ಸಲೆ ಅಡಿ.	ಅದದು.	ಸಲೆ ಅಡಿ.	ಅದದು.	ಸಲೆ ಅಡಿ.	
1	ಸಾಗುವಾನಿ	30	1,500	10	200	...	...	...	...	200	4,500	25	750	
2	ಹೊನ್ನೆ	9	300	36	1,300	...	....	40	1,000	10	200	25	500	
3	ಬೀಟೆ	50	1,800	5	250	...	...	16	400	78	1,900	30	650	
4	ಮತ್ತಿ	120	4,000	214	10,100	10	200	170	4,500	130	3,500	25	650	
5	ನಂದಿ	40	1,200	5	200	20	500	16	500	70	1,800	...	...	
6	ಹುನಾಲು	70	2,500	100	3,000	25	1,000	50	1,000	86	2,000	...	...	
7	ಬಿಲ್ವಾರ	...	...	...	...	...	...	...	...	1	10	6	150	ಹೆಚ್ಚು ಕಮ್ಮಿ.
8	ಯತ್ತಾಗ	4	70	20	1,500	20	500	63	1,860	33	1,200	...	...	
9	ತಡಸಲು	30	800	2	60	10	200	...	....	15	300	...	...	
10	ಬಾಗೆ	4	100	...	...	...	...	...	...	...	...	...	...	
11	ಜಂಬೆ	800	15,000	20	600	15	325	10	200	56	900	...	...	
12	ಸಾಗುವಾನಿ ತೀರು	177	200	...	...	...	...	...	...	2,290	1,800	...	...	
13	ಡಿಪೋ ಹಲಿಗೆ	153	900	...	...	...	...	...	...	...	...	...	..	
14	ಡಿಪೋ ರಿಪೀನು	ರ. ಅ.	800	...	...	...	...	...	...	...	...	...	...	
15	ಜಂಬೆ ಹಲಿಗೆ	53	100	...	...	...	...	...	...	...	...	...	...	
16	ನೆರಲು	...	...	30	1,200	...	...	18	500	4	100	...	...	

ಹರಾಜು ಪರತ್ತುಗಳು :—(1) ಚಡ ದರಖಾಸ್ತುದಾರನು ಹರಾಜು ನಡೆದ ಐದು ದಿವಸಗಳೊಳಗಾಗಿ ಹರಾಜು ಮೊಬಲಗು ಪೈಕಿ ಕಾಲು ಹಿಸ್ಸೆ ಮೊಬಲಗು ಸವಿೀಪದಲ್ಲಿರುವ ಖಜಾನೆಗೆ ಜಮಾ ಮಾಡಿಸತಕ್ಕದ್ದು. ಹಾಗೆ ಮಾಡದೆ ತಪ್ಪಿದಲ್ಲಿ ಬಾಬು ದುಸರಾ ಹರಾಜು ಮಾಡಿ ಅದರಿಂದ ಉಂಟಾಗುವ ನಷ್ಟಕ್ಕೆ ಅವಲ್ ಹರಾಜುದಾರರನ್ನು ಗುರಿಪಡಿಸುತ್ತೆ.

(2) ಖರೀದಿ ಮೊಬಲಗು ಪೈಕಿ ಉಳಿದ ಮೊಬಲಗನ್ನು ಹರಾಜು ತಾರೀಖು ಲಾಗಾಯಿತು (30) ಮೂವತ್ತು ದಿವಸಗಳಲ್ಲಿ ಪಾವತಿ ಮಾಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಇದಕ್ಕೆ ಮೊದಲೇ ಜಮಾಮಾಡಿಸಿರುವ ಡಿಪಾಜಿಟ್ ಮೊಬಲಗು ದಂಡವಾಗಿ ಸರ್ಕಾರಕ್ಕೆ ಸ್ವೀರಿಸಿಕೊಳ್ಳಲ್ಪಡುತ್ತೆ. ಮತ್ತು ನಾಟಾಗಳನ್ನು 1ನೆ ಫ್ಯಾರಾದಲ್ಲಿ ನಮೂದು ಮಾಡಿರುವಂತೆ ದುಸರಾ ಹರಾಜು ಮಾಡಿಸಿ ಉಂಟಾಗುವ ಲುಕ್ಸಾನು ಮೊಬಲಗನ್ನು ಅವಲ್ ಹರಾಜು ದಾನಿಂದ ವಸೂಲ್ಮಾಡಲ್ಪಡುತ್ತೆ.

(3) ಹರಾಜಿನಲ್ಲಿ ಪಡದಿರುವ ನಾಟಾ ಕಿವ್ಮತ್ತು ಪೂರ್ತಿ ಪಾವತಿ ಮಾಡದೆಯೂ ಮತ್ತು ಸದರಿ ನಾಟಾಗಳನ್ನ ಸಾಗಿಸುವದಕ್ಕೆ ರಹದಾರಿ ಪಡೆಯದೆಯೂ ಮೂಲು ರಫ್ತು ಮಾಡಕೂಡದು.

(4) ಹರಾಜು ತಾರೀಖು ಲಾಗಾಯಿತು (90)ತೊಂಭತ್ತು ದಿವಸಗಳ ಮೇಲ್ಪಟ್ಟು ಮರಗಳನ್ನ ಡಿಪೋದಿಂದ ಸಾಗಿಸದೇ ಇದ್ದಲ್ಲಿ ಹರಾಜು ತಾರೀಖು ಲಾಗಾಯಿತು ಖರೀದಿ ಮೊಬಲಗಿನಮೇಲೆ ವರ್ಷ 1ಕ್ಕೆ ಕೇಕಡ 12 ರೂಪಾಯಿನಂತೆ ಡಿಪೋ ಭಾಡಾ ವಸೂಲ್ ಮಾಡಲ್ಪಡುತ್ತೆ.

ಬಿ. ಹಿರಾಸಿಂಗ್, ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಕಡೂರು ಡಿಸ್ಟ್ರಿಕ್ಟ್.

ಇಸ್ತಿಹಾರ್.

ತಾರೀಖು 28ನೆ ಫೆಬ್ರವರಿ 1909.

ಎಲ್ಲಾ ಜನಗಳಿಗೂ ತಿಳಿಯಪಡಿಸುವದೇನಂದರೆ—ಹಾಸನ ಡಿಸ್ಟ್ರಿಕ್ಟಿನಲ್ಲಿ ಜಮೀನಿಸಲ್ಪಟ್ಟು ಅರಸಿಕೆರೆ ಡಿಪೋದಲ್ಲಿ ಇಡಿಸಿರುವ (ಹತ್ತು ಸಾವಿರ) 10,000 ಮಣ (ಸ್ವಲ್ಪ ಹೆಚ್ಚು ಕಡಿಮೆ) ಅಳಲಿಕಾಯಿ ಅರಸಿಕೆರೆಯಲ್ಲಿ 1909ನೆ ಏಪ್ರಿಲ್ 5ನೆ ತಾರೀಖು ಸೋಮವಾರ ಮಧ್ಯಾಹ್ನ 12 ಘಂಟೆಗೆ ಹಾಸನ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಹರಾಜ್ ಮಾಡಿಸುತ್ತಾರೆ.

ಸದರಿ ಹರಾಜ್ ಹಜರತ್ ಕರ್ನಲ್ ಸರ್ವೇಯರ್ ಸಾಹೇಬರವರ ಮುಂಜೂರಾತಿಗೆ ಬಳಪಟ್ಟದ್ದಾಗಿರುತ್ತೆ. ಮತ್ತು ಸದರಿ ಅಳಲಿಕಾಯಿಯನ್ನು 1,000 ಮಣಕ್ಕೆ ಒಂದು ಲಾಟಾಗಿ ಮಾಡಿಕೊಂಡು ಹರಾಜ್ ಮಾಡಿಸುತ್ತೆ.

ಹರಾಜು ಷರತ್ತುಗಳು.

1. ಟಿಡ ದರಖಾಸ್ತುದಾರನು ಹರಾಜು ಖೈದಾದ ಒಡನೆ ಹರಾಜು ಮೊಬಲಗು ಪೈಕಿ ಶೇಕಡ 25ರಂತೆ ಆಗುವ ಮೊಬಲಗನ್ನು ಅರಸಿಕೆರೆ ತಾಲ್ಲೂಕು ಖಜಾನೆಗೆ ಕಟ್ಟಿ ಸದರೀ ಟೈಜರಿ ರಸೀತಿಯನ್ನು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರ್ಲಲ್ಲಿ ಹಾಜರ್ಮಾಡಬೇಕು. ತಪ್ಪಿದಲ್ಲಿ ಮಾಲನ್ನು ದುಸರೇ ಹರಾಜು ಮಾಡಿ ಅದರಿಂದ ಉಂಟಾಗುವ ನಷ್ಟಕ್ಕೆ ಅವನನ್ನು ಗುರಿಪಡಿಸುತ್ತೆ. ಪರಂತು ಫಾಯಿದೆ ಆದಲ್ಲಿ ಅದರಲ್ಲಿ ಅವನಿಗೆ ಹಕ್ಕು ಪುಂಟಾಗಲಾರದು.

2. ಖರೀದಿ ಮೊಬಲಗು ಪೈಕಿ ಉಳಿದ ಮೊಬಲಗನ್ನು ಹರಾಜು ತಾರೀಖು ಲಾಗಾಯಿತು 30 ಮುವತ್ತು ದಿವಸಗಳಲ್ಲಿ ಪಾವತಿ ಮಾಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಇದಕ್ಕೆ ಮೊದಲು ಕಟ್ಟಿರುವ ಡಿಪಾಜಿಟ್ಟು ಮೊಬಲಗು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತೆ. ಮತ್ತು ಬಾಬನ್ನು ಬಂದನೇ ಪ್ಯಾರಾದಲ್ಲಿ ಹೇಳಿರುವ ಪ್ರಕಾರ ದುಸರೆ ಹರಾಜು ಮಾಡಲ್ಪಡುತ್ತೆ.

3. ತಾನು ಹರಾಜಿನಲ್ಲಿ ಪಡದಿರುವ ಬಾಬಿನ ಕಿಮ್ಮತ್ತು ಪೂರ್ತಿ ಪಾವತಿ ಮಾಡದೆಯೂ ಮತ್ತು ಸದರಿ ಬಾಬನ್ನು ಸಾಗಿಸುವದಕ್ಕೆ ರಹದಾರಿ ಪಡೆಯದೆಯೂ ಮಾಲನ್ನು ರಫ್ತು ಮಾಡಕೂಡದು.

4. ಹರಾಜು ತಾರೀಖು ಲಾಗಾಯಿತು (30) ಮೂವತ್ತು ದಿವಸಗಳ ವೇಲ್ಪಟ್ಟು ಬಾಬುಗಳನ್ನು ಡಿಪೋದಿಂದ ಸಾಗಿಸದೇ ಇದ್ದಲ್ಲಿ ಹರಾಜು ತಾರೀಖು ಲಾಗಾಯಿತು ಮಣ ಬಂದಕ್ಕೆ ತಿಂಗಳು ಬಂದಕ್ಕೆ ಆರು ಪೈ ವೇರೆ ಡಿಪೋ ಬಾಡಿಗೆ ವಸೂಲ್ಮಾಡಲ್ಪಡುತ್ತೆ. ಮಾಲ್ ಸಂರಕ್ಷಣೆಗೆ ಸರ್ಕಾರದವರು ನ್ಯಾಯವಾದ ಏರ್ಪಾಡನ್ನು ಮೇಲ್ಕಂಡ ವಾಯಿದೆ ಕಳೆದ ನಂತರವು ಮಾಡಿಯು. ಮಾಲು ವಹಿಸಿಕೊಳ್ಳುವಾಗ ಅದು ಯಾವ ಸ್ಥಿತೀಲಿ ಇರುತ್ತೋ ಆ ಸ್ಥಿತೀಲಿ ಅದನ್ನು ವಹಿಸಿಕೊಳ್ಳುವದು ಹರಾಜುದಾರನ ಕರ್ತವ್ಯವಾಗಿರುತ್ತೆ.

ಬಿ. ಐ. ಶ್ಯಾಮರಾವ್,
ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್, ಹಾಸನ ಡಿಸ್ಟ್ರಿಕ್ಟ್.

ಪ್ರಕಟನೆ.

ಕೋಲಾರ ಡಿಸ್ಟ್ರಿಕ್ಟು ಚಿಕ್ಕಬಳ್ಳಾಪುರದ ತಾಲ್ಲೂಕು ನಂದಿ ಹೋಬಳಿ ಸಂಬಾರಗಿಡ ಕಾವಲ್ ಫಾರೆಸ್ಟನ್ನು ಮನ್ನಾಜಂಗಲಿ ಮಾಡುವ ವಿಷಯವನ್ನು 1909ನೆ ಇಸವಿ ಮಾರ್ಚಿ 4ನೆ ತಾರೀಖಿನ ಮೈಸೂರು ಕನ್ನಡ ಗೆಜೆಟ್ಟಿನ IIನೆ ಭಾಗದ 120-121ನೆ ಪೇಜಿನಲ್ಲಿ ವಿಶದವಾಗಿ ತಿಳಿದುಕೊಳ್ಳಬಹುದು.

ಎಂ. ಶ್ಯಾಮರಾವ್,
ಫಾರೆಸ್ಟ್ ಸೆಟ್ಲಮೆಂಟ್ ಆಫಿಸರ್ ಇನ್ ಮೈಸೂರು.

ಮೈಸೂರು ಡಿಸ್ಟ್ರಿಕ್ಟ್.

ಪ್ರಕಟನೆ.

ಸ॥ 1909ನೆ ಜನವರಿ 7ರಲ್ಲು.

ಮಂಡ್ಯದ ತಾಲ್ಲೂಕು ಮಂಡ್ಯದ ಗ್ರಾಮವನ್ನು ಆದರ ಆಸ್ತಾಸ್ ಇರುವ ಕಲ್ಲಹಳ್ಳಿ, ಚಿಂದಿಗಿರಿದೊಡ್ಡಿ, ಚಿಕ್ಕಮಂಡ್ಯ, ಪೊಟ್ಟಲಿಂಗನದೊಡ್ಡಿ, ದ್ಯಾವೆಗೌಡನದೊಡ್ಡಿ, ಹೊಸಹಳ್ಳಿ ಎಂಬ ಈ ಆರು ಗ್ರಾಮಗಳನ್ನು ಸೇರಿಸಿ 1906ನೆ ಇಸವಿ 7ನೆ ನಂ. ಬರು ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷನಿನ 8 (1)ನೆ ಪ್ರಕರಣವನ್ನನುಸರಿಸಿ ಒಂದು ಮ್ಯುನಿಸಿಪಾಲಿಟಿಯನ್ನಾಗಿ ಮಾಡಲು ಉದ್ದೇಶಿಸಿರುತ್ತೆ. ಈ ಏರ್ಪಾಡಿಗೆ ಆಕ್ಷೇಪಿಸುವವರೆಲ್ಲರೂ ಈ ಇಸ್ತಿಹಾರ್ ಮೈಸೂರು ಗೆಜೆಟ್ಟಿನಲ್ಲಿ ಮೊದಲಾವರ್ತಿ ಪ್ರಕಟಿಸಿದ 2 ತಿಂಗಳ ಒಳಗಾಗಿ ಅಂಥಾ ಆಕ್ಷೇಪಣೆಗಳನ್ನು ಕಾರಣ ಸಹಿತವಾಗಿ ಬರಹ ಮೂಲಕ ಮೈಸೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರಿಗೆ ತಿಳಿಸಬೇಕು. ಮೇಲ್ಕಂಡ ಆರು ಉಪ ಗ್ರಾಮಗಳನ್ನು ಸೇರಿದ ಮಂಡ್ಯ ಪಟ್ಟಣದ ಚತುರ್ಹದ್ದಿಗಳು ಈ ಕೆಳಗೆ ತೋರಿಸಲ್ಪಟ್ಟಿವೆ.

ಮಂಡ್ಯ ಮ್ಯುನಿಸಿಪಾಲಿಟಿಯ ಸರಹದ್ದು ಬನ್ನೂರು ರಸ್ತೆಯ ಹತ್ತರ ಇರುವ ಮಂಡ್ಯ ಗ್ರಾಮದ ಸರ್ವೆ 120ನೆ ನಂಬರಿನ ನೈರುತ್ಯ ಮೂಲೆಯ ಹತ್ತರ ಪ್ರಾರಂಭವಾಗಿ ಸರ್ವೆ 120—121 ಮತ್ತು 122ನೆ ನಂಬರುಗಳ ಪಶ್ಚಿಮ ಸರಹದ್ದನ್ನು ಅನುಸರಿಸಿ ವಾಯವ್ಯಾಭಿಮುಖವಾಗಿ ಹೊರಟು ಸರ್ವೆ 124—125—126 ಮತ್ತು 127ನೆ ನಂಬರುಗಳ ದಕ್ಷಿಣ ಸರಹದ್ದನ್ನು ಸರ್ವೆ 128ನೆ ನಂಬರಿನ ನೈರುತ್ಯಮೂಲೆಯನ್ನು ಸೇರುವ ವರಿವಿಗೂ ಹೋಗುತ್ತದೆ. ಇಲ್ಲಿಂದ ಮುಂದಕ್ಕೆ ಸರ್ವೆ 215ನೆ ನಂಬರಿನ ವಾಯವ್ಯ ಮೂಲೆಯ ವರಿವಿಗೂ ಉತ್ತರಾಭಿಮುಖವಾಗಿ ಹೋಗಿ ಅಲ್ಲಿಂದ ವಾಯವ್ಯಾಭಿಮುಖವಾಗಿ ಸರ್ವೆ 216—223 ಮತ್ತು 224ನೆ ನಂಬರುಗಳ ದಕ್ಷಿಣ ಸರಹದ್ದನ್ನು ಅನುಸರಿಸಿ ಮೈಸೂರು ರಸ್ತೆಯನ್ನು ದಾಟಿಕೊಂಡು ಸರ್ವೆ 226ನೆ ನಂ